***ವಿಷಯ : ರಾಜ್ಯದಲ್ಲಿರುವ ಅನಧಿಕೃತ ಟಿ.ಸಿ. ಹೆಚ್ ಶಾಲೆಗಳು***

1308 (1759)-ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಅನಧಿಕೃತ ಟಿ.ಸಿ.ಹೆಚ್‌ಶಾಲೆಗಳನ್ನು ಕಳೆದ 2 ವರ್ಷಗಳಲ್ಲಿ ಗುರುತಿಸಲಾಗಿದೆ.

ಆ) ರಾಜ್ಯದ ಅನಧಿಕೃತ ಟಿ.ಸಿ.ಹೆಚ್ ಶಾಲೆಗಳು ಸುಮಾರು 10,000 ವಿದ್ಯಾರ್ಥಿಗಳಿಗೆ 1995 ಡಿಸೆಂಬರ್‌ನಲ್ಲಿ ವಿಶೇಷ ಪರೀಕ್ಷೆ ಜರುಗಿದ್ದು ನಿಜವೆ

ಇ) ಈ ದಿಸೆಯಲ್ಲಿ ಆಗಿರುವ ಪ್ರಗತಿ ಏನು?

ಈ) ಅನಧಿಕೃತ ಶಾಲೆಗಳಿಂದ ಅಮಾಯಕ ವಿದ್ಯಾರ್ಥಿಗಳಿಗೆ ಆಗುತ್ತಿರುವ ವಂಚನೆ ತಡೆಗಟ್ಟಲು ಸರ್ಕರ ಯೋಚಿಸಿರುವ ಕ್ರಮವೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.)

ಅ) 84

ಆ) ಹೌದು

ಇ) ಅನಧಿಕೃತ ಸಂಸ್ಥೆಗಳಲ್ಲಿನ ಅರ್ಹ ವಿದ್ಯಾರ್ಥಿಗಳು ಟಿ.ಸಿ.ಹೆಚ್.ಕೋರ್ಸ್‌ನ್ನು ಮುಂದುವರಿಸಲು ಅನುಕೂಲವಾಗುವಂತೆ, ಅಧಿಕೃತ ಸಂಸ್ಥೆಗಳಿಗೆ ಸೇರ್ಪಡೆ ಮಾಡುವ ಸಲುವಾಗಿ ಒಂದು ವಿಶೇಷ ಕಾರ್ಯಯೋಜನೆಯನ್ನು ರೂಪಿಸಿ ಜಾರಿಗೊಳಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

***ವಿಷಯ : ರಾಜ್ಯದಲ್ಲಿರುವ ದಂತ ವಿಜ್ಞಾನ (ಡೆಂಟಲ್) ಕಾಲೇಜುಗಳು***

1309 (1760)-ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ದಂತ ವಿಜ್ಞಾನ (ಡೆಂಟಲ್) ಕಾಲೇಜುಗಳ ಸಂಖ್ಯೆ ಎಷ್ಟು?

ಆ) ದಂತ ವಿಜ್ಞಾನ ಕಾಲೇಜುಗಳಿಗೆ ಅನುಮತಿ ನೀಡುವಾಗ ಸರ್ಕಾರ ಅನುಸರಿಸಿರುವ ನೀತಿಗಳೇನು?

ಇ) ಭಾರತದ ದಂತ ವಿಜ್ಞಾನ ಪರಿಷತ್ತಿನ (ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದ) ರೆಕಗ್ನಿಷನ್ ಮಾನ್ಯತೆ ಇಲ್ಲದೆ ನಡೆಯುವತ್ತಿರುವ ಕಾಲೇಜುಗಳು ಎಷ್ಟಿದೆ?

**ಈ) ಈ ರೀತಿ ಡಿಸಿಐ ರೆಕಗ್ನಿಷನ್ (ಮಾನ್ಯತೆ) ಇಲ್ಲದ ಕಾಲೇಜುಗಳಿಗೆ ಸೇರಿಸುವಂತೆ** 1994-95, 1995-96ರಲ್ಲಿ ಆದೇಶ ನೀಡಲಾಗಿರುವ ಸಿ.ಇ.ಟಿಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

**ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)**

ಅ) ಭಾರತೀಯ ದಂತ ಪರಿಷತ್ತಿನ ತಿದ್ದುಪಡಿ ಆಕ್ಟ್ 1993 ಸೆಕ್ಷನ್ 10(ಎ) ಪ್ರಕಾರ ಅನುಮತಿ ನೀಡಬೇಕಾಗುತ್ತದೆ. ಆದಾಗ್ಯೂ ಈ ಕೆಳಗಿನಂತೆ ಕಾರ್ಯ ವಿಧಾನವನ್ನು ಪಾಲಿಸಬೇಕಾಗುತ್ತದೆ.

ಆ) ದಂತ ಕಾಲೇಜು ಪ್ರಾರಂಭಿಸಲು ಸಂಬಂಧಪಟ್ಟ ಟ್ರಸ್ಟ್ ಅಥವಾ ಸಂಸ್ಥೆಯವರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಯನ್ನು ಪಡೆಯಲು ಮನವಿಯನ್ನು ಸಲ್ಲಿಸಬೇಕು. ವಿಶ್ವವಿದ್ಯಾನಿಲಯದಿಂದ ಸಂಯೋಜನೆಯನ್ನು ಪಡೆದನಂತರ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಅಗತ್ಯತೆಯ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ. ರಾಜ್ಯ ಸರ್ಕಾರದಿಂದ ಈ ಅಗತ್ಯತೆಯ ಪ್ರಮಾಣ ಪತ್ರವನ್ನು ಪಡೆದ ನಂತರ ಟ್ರಸ್ಟ್ ಅಥವಾ ಸಂಸ್ಥೆಯವರು ಕೇಂದ್ರ ಸರ್ಕಾರಕ್ಕೆ ದಂತ ವಿಜ್ಞಾನ ಕಾಲೇಜುನ್ನು ಪ್ರಾರಂಭಿಸಲು ಭಾರತೀಯ ದಂತ ಪರಿಷತ್ತಿನ ಕಾನೂನಿನಂತೆ ಅನುಮತಿಯನ್ನು ಕೋರಿ ಮನವಿಯನ್ನು ಸಲ್ಲಿಸಬೇಕಾಗಿರುತ್ತಾದೆ.

ಇ) ಭಾರತೀಯ ದಂತ ಪರಿಷತ್ತಿನ ತನಿಖಾ ವರದಿ ಮತ್ತು ಶಿಫಾರಸ್ಸುಗಳ ಮೇಲೆ ಕೇಂದ್ರ ಸರ್ಕಾರ ದಂತ ವಿಜ್ಞಾನ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ ತೀರ್ಮಾನ ತೆಗೆದುಕಕೊಳ್ಳುತ್ತದೆ.

ಈ) 41 ಕಾಲೇಜುಗಳ ಪೈಕಿ 19 ಕಾಲೇಜುಗಳು ಭಾರತೀಯ ದಂತ ಪರಿಷತ್ತಿನಿಂದ ಮಾನ್ಯತೆ ಪಡೆದಿವೆ ಹಾಗೂ 9 ಕಾಲೇಜುಗಳು ಅನುಮೋದನೆ ಪಡೆದಿವೆ. ಪ್ರಸ್ತುತ 13 ಕಾಲೇಜುಗಳು ಅರ್ಜಿಗಳು ಕೇಂದ್ರ ಸರ್ಕಾರ ಹಾಗೂ ಭಾರತೀಯ ದಂತ ಪರಿಷತ್ತಿನ ಪರಿಶೀಲನೆಯಲ್ಲಿವೆ.

ಈ) ಡಿ.ಸಿ.ಐ. ನಿಂದ ಮಾನ್ಯತೆ ಹೊಂದದೆ ಅನುಮೋದನೆ ಆಗಿರುವ ಕಾಲೇಜುಗಳ

| ವಿದ್ಯಾರ್ಥಿಗಳ ಸಂಖ್ಯೆ | 1994-95 | 1995-96 |
|---|---|---|
| | 208 | 192 |
| ಮಾನ್ಯತೆ ಹೊಂದದದ ಕಾಲೇಜುಗಳ | | |
| ವಿದ್ಯಾರ್ಥಿಗಳ ಸಂಖ್ಯೆ | 394 | 274 |

ಬಿ. ಡಿ. ಎಸ್. ಕೋರ್ಸ್ 41/2 ವರ್ಷಗಳ ಕೋರ್ಸ್ ಆಗಿರುವುದರಿಂದ ಇದುವರೆಗೆ 1994-95 ಹಾಗೂ 1995-96ನೇ ಸಾಲಿನಲ್ಲಿ ಪ್ರವೇಶ ಪಡೆದ ಯಾವುದೇ ವಿದ್ಯಾರ್ಥಿಯು ಸದರಿ ಕೋರ್ಸ್‌ನ್ನು ಪೂರ್ಣಗೊಳಿಸಿರುವುದಿಲ್ಲ.

***Sub : Students oppeared for CET during 94-95 and 95-96.***

1310 (1761)-Shri S. Sureshkumar. (Rajajinagar) : Will the Minister for Higher Education be pleased to state

1. During the Years 1994-95 and 1995-96 how many students appeared for CET.

2. During these years how many students were admitted.

3. Is the Counselling Progressing satisfactorilly ?

4. In view of the experience duridng 1995-96 what steps the Government proposes to take-especially regading the Post-graduate Courses to complete the exams and counselling by the CET during the succeding year.

Sri B. Somashakar (Minister for Higher Education.)

1. 1994-95 - 46014

   1995-96 - 40976